ಹಾಲು ಹಣ್ಣು ತುಪ್ಪ ತುಂಬಿದ ಮನೆಯಿಂದ, ತಿನ್ನಲು ಗತಿ ಇಲ್ಲದ ಚೆನ್ನಿಗರಾಯನ ಮನೆಯ ಸಂಪೂರ್ಣ ಅಧೋಗತಿಯವರೆಗಿನ ಅವಳ ಪಯಣ ಕಥಾರ್ಸಿಸ್‌ನ ಚಾಣಾಕ್ಷ ಸೃಷ್ಟಿ. ಅಪ್ಪನೇ ಜಾತಕ ನೋಡಿ ನಿಶ್ಚಯಿಸಿದ ಮದುವೆಗೆ ಕೊರಳೊಡ್ಡಿ ಕಾಣದ ಪ್ರಪಂಚವೊಂದಕ್ಕೆ ಒಂದು ಮುಂಜಾನೆ ಸೇರಿ ಹೋಗುವುದು ಈಗಿನ ಕಾಲಮಾನದಲ್ಲಿ ನಾವು ಊಹಿಸಿಕೊಳ್ಳಲೂ ಸಾಧ್ಯವಿಲ್ಲದ ಪರಿ. ಹಾಗೆ ಮದುವೆಯಾದವರಾದರೂ ಪುಣ್ಯವಂತರು. ಇಲ್ಲದಿದ್ದರೆ, ಮದುವೆಯಾಗದೆ ಮೈನೆರೆದರೆ ಕಾಡೇ ಗತಿಯಾಗುತ್ತಿತ್ತಲ್ಲ... ಬ್ರಾಹ್ಮಣರ ಮನೆಗಳಲ್ಲಿ ಪದೇಪದೇ ಕೇಳಿ ಬರುವ 'ನಿನ್ನ ಹಣೆ ಬರಹ' ಎಂಬ ಮಾತು



ಮೈವತ್ತಂತೆ, ನಡೆಯುವ ಪ್ರಸಂಗಗಳಿಗೆ ತಪ್ಪಿಲ್ಲದೆಯೂ ಬಲಿಪಶುವಾಗುವ ಇವಳ ಪಾತ್ರ ಸುಲಭಕ್ಕೆ ದಕ್ಕುವುದೇ ಇಲ್ಲ. ಇದೊಂದು ಕಥೆ ಎಂದಾಗ ನಾವು ಕಥೆಗಾರನನ್ನು ಕ್ಷಮಿಸುವುದೂ ಇಲ್ಲ.

ಭೈರಪ್ಪನವರ ಕಾದಂಬರಿಗಳನ್ನು ಓದಲು ತೊಡಗಿದಾಗ ಆಗ ತಾನೇ ಎಂ.ಕೆ. ಇಂದಿರಾ, ಸಾಯಿಸುತೆ, ತ್ರಿವೇಣಿಯವರ ಕಾದಂಬರಿಗಳಿಂದ ಒಂದು ಹೆಜ್ಜೆ ಮುಂದಿಟ್ಟಿದ್ದೆ. ಬಹುಶಃ ಓದಿದ ಕಾಲ, ಸ್ಥಿತಿ ಹಾಗೂ ವಾತಾವರಣಗಳಿಂದಾಗಿ ಅಳಿಸಲಾಗದ ಚಿತ್ರವೊಂದನ್ನು ಈ ಕಾದಂಬರಿಗಳು ಚಿತ್ತಭಿತ್ತಿಗೆ ಒರಗಿಸಿ ಹೋದವು. ಓದಿನ ಸುಖದ ಮಟ್ಟಿಗೆ ಮಾತ್ರ ಓದಿದೆನೇ ಹೊರತು ಓದಿದ್ದನ್ನು ವಿಮರ್ಶೆಗೆ ಒಳಪಡಿಸಬೇಕೆಂಬ ಮುಂದಿನ ಹಂತ ತಲುಪುವಾಗ ಸ್ವಲ್ಪ ಸಮಯ ಹಿಡಿಯಿತು. ಆಮೇಲೆ ಮತ್ತೊಮ್ಮೆ ಈ ಕಾದಂಬರಿ ಓದುವಾಗ ಹಲವು ವಿಚಾರಗಳಿಗೆ ಒರೆ ಹಚ್ಚಿದ್ದಾಯಿತು.

ಆದರೆ, ಎಷ್ಟೇ ಓದುಗಳಲ್ಲಿಯೂ, ಏನೇನೋ ಹೊಸ ಹೊಳಹುಗಳು ಕಂಡರೂ ಇದೊಂದು ಪಾತ್ರ ಮಾತ್ರ ತನ್ನ ಸ್ಥಾಯೀರೂಪದಿಂದ ಪಲ್ಲಟಗೊಳ್ಳಲೇ ಇಲ್ಲ. ಅದಲ್ಲದೆ ಇದೇ ಪರಿಸರದಲ್ಲಿನ ಹಿರಿಯರನ್ನೂ, ಬಾಲ್ಯದಲ್ಲಿ ಹಳ್ಳಿಯ ವಹಿವಾಟಿನ ಬ್ರಾಹ್ಮಣರ ಮನೆಯನ್ನೂ ಬಹು ಹತ್ತಿರದಿಂದ ಕಂಡು ಬೆಳೆದ ನನಗೆ 'ಗೃಹಭಂಗ'ದ ಓದು ಅನಾಮತ್ತು ನನ್ನನ್ನೇ ಕಾದಂಬರಿಯ ಗ್ರಾಫಿಕ್ ಚಿತ್ರಣದ ನಡುವೆ ತಂದು ನಿಲ್ಲಿಸಿತು. ನಂಜಮ್ಮನೆಂಬ ಹೆಸರಿನ ವ್ಯಕ್ತಿಯನ್ನು ಕೂಡಾ ನಾನು ಕಣ್ಣಾರೆ ಕಂಡಿದ್ದೆ. ಅದೇ ಪಡಿಪಾಟಲು, ನೋವಿನ ಬದುಕೂ ಕಣ್ಣಾರೆ ನೋಡಲು ಸಿಕ್ಕು ಈ ಪಾತ್ರದೊಟ್ಟಿನ ಸಾಮ್ಯತೆಯು ಹೆಚ್ಚಿತ್ತು. ಹೀಗೆ ಕೇವಲ ಜಾತಕ ನೋಡಿ ಮದುವೆ ಮಾಡಿದ ನಂತರ ಮನೆಯಲ್ಲಿ ಅಕ್ಕನೊಬ್ಬಳು ಹಿಂಸೆ ತಾಳಲೂ ಆಗದೆ ವಾಪಸು ಬಂದು ಹೇಳಿಕೊಳ್ಳಲೂ ಆಗದೆ ತೀರಿಕೊಂಡಿದ್ದಳು. ಅವಳು ಕಷ್ಟವೆಂದಾಗ ಮನೆಯ ಹಿರಿಯರು ಹೇಳಿದ ಎರಡು ಮಾತು ನನಗೆ ಈಗಲೂ